## 5

# ದಾವೀದನ ಮಗನು ಹಾಗೂ ದೇವರ ಮಗನು

## (2 ಸಮುವೇಲ 7:1-17)

ಒಂದು ಪಟ್ಟಣವು, ಅದು ಎಷ್ಟೇ ದೊಡ್ಡದಿರಲಿ ಅಥವಾ ಚಿಕ್ಕದಿರಲಿ, ಅದರಲ್ಲಿ ಬಾರ್ತಿಮಾಯಿನಂತ ಒಬ್ಬ ಕುರುಡು ವ್ಯಕ್ತಿಯು ಇದ್ದೆ ಇರುತ್ತಾರೆ; ಮಾರ್ಕ 10:46-52ರಲ್ಲಿ, ಭಿಕ್ಷುಕನಾದ ಬಾರ್ತಿಮಾಯನು ಯೇಸುವನ್ನು ಸಂಧಿಸಿದನು. ಈ ವಿಧವಾದಂಥ ಜನರು ಉತ್ತಮವಾದ ಸ್ಥಳಗಳಲ್ಲಿ ಇರುವದಾದರೂ, ಅವರ ಕುರಿತು ಇತರರಿಗೆ ಚಿಂತನೆ ಇಲ್ಲದ ಕಾರಣ ಅವರುಗಳು ಆ ಸ್ಥಳದಲ್ಲಿರುವದು ವ್ಯರ್ಥವೇ.

ಎಷ್ಟು ದಿವಸಗಳಿಂದ ಬಾರ್ತಿಮಾಯನ್ನು ಕುರುಡನಾಗಿದ್ದುಕೊಂಡು ರಸ್ತೆಯ ಬದಿಯಲ್ಲಿ ಇದ್ದನು ಎಂಬದನ್ನು ನಾವು ಅರಿಯೆವು. ಆದರೆ ಅವನು ಸರಿಯಾದ ಸಮಯದಲ್ಲಿ ಸರಿಯಾದ ಸ್ಥಳದಲ್ಲಿ ಅವನು ಇದ್ದನು ಯಾಕೆಂದರೆ ಯೇಸು ಅವನನ್ನು ಅಲ್ಲಿ ಸಂಧಿಸುವದಕ್ಕಿದ್ದನು. ಕುರುಡರಿಗೆ ಕಣ್ಣು ದೊರಕಿಸುವ ಸಾಮರ್ಥ್ಯವನ್ನು ಯೇಸು ಹೊಂದಿರುವನು ಎಂಬ ಸಂಗತಿಯನ್ನು ಅರಿತವನಾಗಿ, ಆ ಒಂದು ಅವಕಾಶವನ್ನು ಅವನು ಕಳೆದುಕೊಳ್ಳಲಿಲ್ಲ. ಅವನು "ಕೂಗುವದಕ್ಕೆ" ಆರಂಭಿಸಿದನು. ಮಾರ್ಕ 10:47ರಲ್ಲಿ ಅವನು ಒಂದೇ ಸಾರಿ ಕೂಗಲಿಲ್ಲ ಎಂಬ ಸೂಚನೆಯಿದೆ, ಅವನು "ದಾವೀದ ಕುಮಾರನೇ ನನ್ನನ್ನು ಕರುಣಿಸು ಎಂದು ಕೂಗುತ್ತಲೇ ಇದ್ದನು!" ಆ "ಅನಾಥನ" ಅಕ್ರಂದನವನ್ನು ಆಲಿಸಿದ ಕೆಲವರು ಅವನಿಗೆ ಮೌನವಾಗಿರುವಂತೆ ಹೇಳಿದರು. ಮಾರ್ಕನ ಲೆಕ್ಕಾಚಾರದಲ್ಲಿ, ಅವನು, "ದಾವೀದನ ಕುಮಾರನೇ, ನನ್ನನ್ನು ಕರುಣಿಸು ಎಂದು ಮತ್ತಷ್ಟು ಕೂಗಿಕೊಂಡನು" ಎಂಬುದಾಗಿದೆ! (ವಚನ 48). ಅವನ ಒತ್ತಾಯಕ್ಕೆ ಉತ್ತರ ದೊರಕಿತು. ಆಗ ಯೇಸು ನಿಂತು - ಅವನನ್ನು ಕರೆಯಿರಿ ಅನ್ನಲು ಅವರು ಆ ಕುರುಡನನ್ನು ಕರೆದು ಧೈರ್ಯವಿರಲಿ, ಏಳು ನಿನ್ನನ್ನು ಕರೆ ಯುತ್ತಾನೆ ಅಂದರು. ಬಾರ್ತಿಮಾಯನು ಈ ಕರೆಗೆ ವಿಧೇಯನಾದಾಗ, ಅವನು ಸ್ವಸ್ಥತೆಯನ್ನು ಹೊಂದಿದನು.

ಬಾರ್ತಿಮಾಯನ ಕಥೆಯಲ್ಲಿ ತನ್ನದೇ ಆದ ಸ್ವಾರಸ್ಯವಿರುತ್ತದೆ. ಆದರೆ ಅದರಲ್ಲಿ ಒಂದು ಆಸಕ್ತಿಕರವಾದ ಹಾಗೂ ಪ್ರಮುಖವಾದ ಒಂದು ಪ್ರಶ್ನೆಯಿದೆ: ಬಹಳ ಪ್ರಮುಖವಾದ "ದೇವರ ಮಗನು" ಎಂಬ ನಾಮಾಂಕಿತವನ್ನು ಅವನು ಏಕೆ ಉಪಯೋಗಿಸಲಿಲ್ಲ "ಕರ್ತನು" "ಗುರುವು" ಅಥವಾ ಯೇಸುವೇ ಎಂಬ ಪದ ಬಳಕೆಯನ್ನು ಮಾಡಲಿಲ್ಲ, ಹಾಗೂ ಮನುಷ್ಯ ಕುಮಾರನೇ? ಎಂದು ಕರೆಯಲಿಲ್ಲ. ಈ ಕುರುಡನ ಸ್ವಸ್ಥತೆಯಲ್ಲಿ, ದಾವೀದನ ಕುಮಾರನೇ ಎಂದು ಹೇಳಿ ದಾವೀದನ ವಂಶಾವಳಿಯ ಕುರಿತು ಹೇಳಲಾಗಿದೆ.

### ಒಂದು ವಾಗ್ದಾನ

**ದಾವೀದನಿಗಾಗಿ ಕಟ್ಟಲಿಕ್ಕಿರುವ ಒಂದು "ಮನೆ"!**

ಒಂದು ಸಾವಿರ ವರ್ಷಗಳ ಹಿಂದೆ ದೇವರು ದಾವೀದನಿಗೆ ಮಾಡಿದ ವಾಗ್ದಾನವನ್ನು 2 ಸಮುವೇಲ 7:1-17ರಲ್ಲಿ ದಾಖಲು ಮಾಡಲಾಗಿದೆ. ದಾವೀದನು ಇಸ್ರಾಯೇಲ್ಯರ ಅರಸನಾಗಿ ಸಿಂಹಾಸನವೇರಿದ್ದನು. ಅವನು ಸ್ಥಿರವಾದ ಮನೆಯಲ್ಲಿ ವಾಸಿಸುತ್ತಿದ್ದನು (ಗುಡಾರ ಹಾಗೂ ರಣರಂಗ ಸ್ಥಳದಲ್ಲಿ ಇರುವ ಬದಲು), "ಸಕಲ ವಿಧವಾದ ವೈರಿಗಳಿಂದ ದೇವರು ಅವನಿಗೆ

ವಿಶ್ರಾಂತಿಯನ್ನು ನೀಡಿದ್ದನು" (ವಚನ 1ಬಿ). ಈ ಪರಿಸ್ಥಿತಿ ಬಗ್ಗೆ ದಾವೀದನ ಹೃದಯದಲ್ಲಿ ಒಂದು ದುಗುಡ ಉಂಟಾಗಿತ್ತು. ಆಗ ಅವನು ಈ ವಿಚಾರವನ್ನು ಪ್ರವಾದಿಯಾದ ನಾತಾನನ ಸಂಗಡ ಮಾತನಾಡಿದನು: ನೋಡು, ನಾನು ದೇವದಾರು ಮರದ ಮನೆಯಲ್ಲಿ ವಾಸವಾಗಿದ್ದೇನೆ: ದೇವರ ಮಂಜೂಷವಾದರೋ ಬಟ್ಟೆಯ ಮನೆಯಲ್ಲಿ ಇರುತ್ತದೆ ಎಂದು ಹೇಳಿದನು (ವಚನ 2). ತಾನು ಉತ್ತಮವಾದ ಮನೆಯಲ್ಲಿ ಇರುವದು ದಾವೀದನಿಗೆ ಸರಿಕಾಣಲಿಲ್ಲ ಏಕೆಂದರೆ ಐಗುಪ್ತದಿಂದ ತಪ್ಪಿಸಿಕೊಂಡಾಗ ಯಾವ ಪರಿಶುದ್ಧವಾದ ದೇವ ಮಂಜೂಷವನ್ನು ಅವರು ನಿರ್ಮಿಸಿದ್ದರೋ, ಅದು ಇನ್ನೂ ಸಹ ಗುಡಾರದಲ್ಲಿಯೇ ನೆಲಸಿತ್ತು. ಆದರೆ ದಾವೀದನು ಅದಕ್ಕಾಗಿ, "ಒಂದು ಮನೆಯನ್ನು ಕಟ್ಟಲು" ಮುಂದಾದನು ಎಂಬ ಪೂರ್ಣ ಸೂಚನೆಯು ಇಲ್ಲಿರುವದಿಲ್ಲ. ದೇವರಿಗಾಗಿ ಉತ್ತಮವಾದ ವಾಸಸ್ಥಳವನ್ನು - ಅಂದರೆ ಒಂದು ಆಲಯದ ವಿಷಯ. ಅವನು ದೇವರನ್ನು ಸನ್ಮಾನಿಸಲು ಮುಂದಾಗಿದ್ದನು, ಅದು ಪರಿಪಕ್ವವಾದ ಸಮಯವಾಗಿತ್ತು. ಅವನ ಯೋಜನೆಯ ಬಗ್ಗೆ, ನಾತಾನನು ಭರವಸವನ್ನು ನೀಡಿ "ಕರ್ತನು ನಿನ್ನ ಸಂಗಡ ಇರುತ್ತಾನೆ" ಅಂದನು. ಹೇಗೂ ಆ ರಾತ್ರಿಯಲ್ಲಿ ದೇವರು ನಾತಾನನಿಗೆ ದರ್ಶನವನ್ನು ನೀಡಿ, ದಾವೀದನಿಗೆ ಸಂದೇಶವನ್ನು ರವಾನಿಸಿದನು:

> ಹೋಗಿ ನನ್ನ ಸೇವಕನಾದ ದಾವೀದನಿಗೆ - ನೀನು ನನಗೋಸ್ಕರ ಮನೆಯನ್ನು ಕಟ್ಟಬೇಕೋ? ನಾನು ಇಸ್ರಾಯೇಲ್ಯರನ್ನು ಐಗುಪ್ತ ದೇಶದಿಂದ ಬರಮಾಡಿದಂದಿನಿಂದ ಇಂದಿನ ವರೆಗೂ ಮನೆಯಲ್ಲಿ ವಾಸಮಾಡಲಿಲ್ಲ. ಗುಡಾರದಲ್ಲೆ ವಾಸಿಸುತ್ತಾ (ಅವರೊಡನೆ) ಸಂಚರಿಸಿದೆನು. ನಾನು ಇಸ್ರಾಯೇಲ್ಯರ ಮಧ್ಯದಲ್ಲಿ ಸಂಚರಿಸುತ್ತಿದ್ದಾಗ ನನ್ನ ಜನರಾದ ಇಸ್ರಾಯೇಲ್ಯರನ್ನು ಪಾಲಿಸುವದಕ್ಕೋಸ್ಕರ ನನ್ನಿಂದ ನೇಮಿಸಲ್ಪಟ್ಟ ಯಾವ ಕುಲದವರನ್ನಾದರೂ - ನೀವು ನನಗೋಸ್ಕರ ದೇವದಾರು ಮರದ ಮನೆಯನ್ನೇಕೆ ಕಟ್ಟಲಿಲ್ಲವೆಂದು ಕೇಳಿದೆನೋ ಎಂಬುದಾಗಿ ಯೆಹೋವನು ಅನ್ನುತ್ತಾನೆ ಎಂದು ಹೇಳು (2 ಸಮು ವೇಲ 7:5-7).

ಆ ಸಂದೇಶವು ಸ್ಪಷ್ಟವಾಗಿತ್ತು: ದೇವರಿಗೆ ಮನೆಯು ಅನಗತ್ಯವಾಗಿದ್ದು, ಅದರಲ್ಲಿ ವಾಸಿಸುವ ಅಗತ್ಯವೂ ಇರಲಿಲ್ಲ. ನಂತರದಲ್ಲಿ, ಆತನಿಗೆ ಒಂದು ಮನೆಯ ಅಗತ್ಯವಿದ್ದರೆ ಅದನ್ನು ದಾವೀದನು ಕಟ್ಟುವ ಅಗತ್ಯವಿರಲಿಲ್ಲ. ದಾವೀದನ ಉದ್ದೇಶವು ಒಳ್ಳೇಯದೇ ಆಗಿದ್ದರೂ, ಅದರಲ್ಲಿ ಒಂದು ಒಳರ್ಥವು ಅಡಗಿತ್ತು. ದಾವೀದನು ದೊಡ್ಡ ಅರಸನಾಗಿದ್ದರೂ, ದೇವರು ಅತಿ ದೊಡ್ಡ ದೇವರೇ ಆಗಿದ್ದನು. ದಾವೀದನು ದೇವರಿಗೆ "ಕೃಪೆ ತೋರಬೇಕೆಂದು" ಆತನು ಬಯಸಲಿಲ್ಲ.

ವಚನ 8 ರಿಂದ 11 ರವರೆಗಿನ ವಾಕ್ಯಗಳಲ್ಲಿ, ದಾವೀದನನ್ನು ಆಶೀರ್ವದಿಸುವವನು ದೇವರೇ ಎಂದು ಆತನು ತಿಳಿಸಿದನು. ದೇವರು ತಾನೇ ಕುರುಬನಾಗಿದ್ದ ದಾವೀದನನ್ನು ಆಯ್ಕೆ ಮಾಡಿ ಇಸ್ರಾಯೇಲ್ಯರ ಸಿಂಹಾಸನದಲ್ಲಿ ಕುಳ್ಳರಿಸಿದ್ದನು. ಆತನೇ ದಾವೀದನ ವೈರಿಗಳನ್ನು ನಿರ್ನಾಮ ಮಾಡಿದ್ದನು, ಆದ್ದರಿಂದ ಅವರ ವೈರಿಗಳ ಭಯವೆಲ್ಲಾ ತಪ್ಪಿ ಹೋಗಿ, ದಾವೀದನು ಸಮಾಧಾನದಿಂದ ವಾಸಿಸಲು ಸಾಧ್ಯವಾಯಿತು. ಅವರಿಗೆ ಇನ್ನು ಕಷ್ಟಗಳಿರುವದಿಲ್ಲ ಎಂಬ ಭರವಸೆಯನ್ನು ನೀಡಲಾಯಿತು.

ವಚನ 11ರಲ್ಲಿ ಆಶ್ಚರ್ಯವಾದ ಹೇಳಿಕೆಯನ್ನು ನೀಡಲಾಗಿದೆ, *"ಇದಲ್ಲದೆ ಯೆಹೋವನಾದ ನಾನು ನಿನಗೋಸ್ಕರ ಒಂದು ಮನೆಯನ್ನು ಕಟ್ಟುವೆನೆಂದು ಮಾತು ಕೊಡುತ್ತೇನೆ"* (ಒತ್ತಿ ಹೇಳಿದ್ದು ನನ್ನದು). ಹೀಗಿರುವಾಗ ದಾವೀದನು ದೇವರಿಗಾಗಿ ಮನೆಯನ್ನು ಕಟ್ಟಲು ಆತನು ಅನು ಮೋದಿಸಲಿಲ್ಲ. ಇಲ್ಲಿ ದೇವರು ಕೈಯಿಂದ ಕಟ್ಟಿದ ಮನೆಯ ಕುರಿತಾಗಿ ಮಾತನಾಡುತ್ತಿರುವದಿಲ್ಲ ದಾವೀದನಿಗೆ ಒಂದು ರಾಜ ವಂಶವನ್ನು ನೀಡುವ ಸಲುವಾಗಿ ಮಾತನಾಡುತ್ತಿದ್ದಾನೆ ದಾವೀದನು ಕಾಲವಾದ ನಂತರ, ಅವನ ವಂಶಸ್ಥರು

ಅದನ್ನು ಆಳಬೇಕೆಂಬುದನ್ನು ತಿಳಿಸಿದ್ದಾನೆ. ಇಲ್ಲಿ "ಮನೆ" ಎಂಬ ಪದವು "ಒಂದು ರಾಜ್ಯ" ಎಂಬುದಾಗಿದೆ. ಹೇಗಂದರೆ ಬ್ರಿಟಿಷರು ತಮ್ಮ ರಾಜ್ಯದ ಕುರಿತು "ವಿಂಡಸಲ್ ಅರಮನೆ" ಎನ್ನುತ್ತಿದ್ದರು. ಹಾಗೆಯೇ ದೇವರು ದಾವೀದನಿಗಾಗಿ, "ಒಂದು ಮನೆಯನ್ನು ಕಟ್ಟುವೆನು" ಎಂದು ಹೇಳಿದನು.

**ದಾವೀದನ ಸಿಂಹಾಸನವನ್ನು ನಿರಂತರವಾಗಿ ಕಟ್ಟುವೆನು!**

2 ಸಮುವೇಲ 7:12-16ರಲ್ಲಿ, ವಿಶೇಷವಾದ ಮೂರು ವಾಗ್ದಾನಗಳನ್ನು ತಿಳಿಸಲಾಗಿದೆ: (1) ದಾವೀದನ ಸ್ಥಾನದಲ್ಲಿ ಒಬ್ಬ ಮಗನು ಆಡಳಿತ ಮಾಡಬೇಕಿತ್ತು. (2) ಆ ಮಗನು ದಾವೀದನಾಗಿರಲಿಲ್ಲ - ಈ ದಾವೀದನು, ದೇವರ ಗೌರವಾರ್ಥ ಒಂದು ಮನೆಯನ್ನು ಕಟ್ಟಲು ದೇವರು ಅನುಮೋದಿಸಲಿಲ್ಲ (ಆಲಯ); ಇದು ಪ್ರಮುಖ ಸಂಗತಿ, (3) ದೇವರು ತನ್ನ ರಾಜ್ಯದ ಸಿಂಹಾಸನವನ್ನು ಸ್ಥಾಪನೆ ಮಾಡುವವದಕ್ಕಿದ್ದನು. ಈ ಸಮರ್ಪಣೆಯ ಮೂಲಕ ದೇವರು ದಾವೀದನ ಮಗನಿಗೆ ತಂದೆಯೂ ಆದನು. ದೇವರು ದಾವೀದನನ್ನು ಶಿಕ್ಷಿಸಿದರೂ, ಅವನ ಮುಂದಿನ ಸೌಲನ ಕುರಿತ ಪ್ರೀತಿಯನ್ನು ತೆಗೆದು ಬಿಟ್ಟರೂ, ದಾವೀದನ ಹೃದಯದಲ್ಲಿದ್ದ ಯಥಾರ್ಥವಾದ ಪ್ರೀತಿಯನ್ನು ತೆಗೆಯಲಿಲ್ಲ (1 ಸಮುವೇಲ 15). ದೇವರು ವಾಗ್ದಾನ ಮಾಡಿ, "ನಿನ್ನ ಮನೆಯೂ ಅರಸು ತನವೂ ಸದಾಕಾಲ ಸ್ಥಿರವಾಗಿರುವವು; ನಿನ್ನ ಸಿಂಹಾಸನವು ಶಾಶ್ವತಾಗಿರುವದು ಎಂಬುದೇ" (2 ಸಮುವೇಲ 7:16; ಒತ್ತಿ ಹೇಳಿರಿ). ಇಂಥಾ ಒಂದು ತೃಪ್ತಿಕರವಾದ ವಾಗ್ದಾನವನ್ನು ದಾವೀದನನ್ನು ಹೊರತು ಪಡಿಸಿ, ಬೇರೆ ಯಾರಿಗೂ ನೀಡಲಾಗಿರುವದಿಲ್ಲ. ಕಡೇಯದಾಗಿ ದಾವಿದನ ರಾಜ್ಯವು ಸಮಾಧಾನದಿಂದ ಇದ್ದು ನಿರಂತರವಾಗಿ ಮುಂದುವರೆಯುವದು ಎಂಬುದೇ! 2 ಸಮುವೇಲ 7:18-29 ದಾವೀದನು ದೇವರ ನಿರಾಕರಣೆಯನ್ನು ಹಾಗೂ ಆಶೀರ್ವಾದವನ್ನು ಕೃತಜ್ಞತಾ ಮನೋಭಾವದಿಂದ ಸ್ವೀಕರಿಸಿದನು ಎಂದು ಉಲ್ಲೇಖಿಸುತ್ತದೆ.

ದಾವೀದನಿಗೆ, ದೇವರು ಮಾಡಿದ ವಾಗ್ದಾನಗಳನ್ನು ಪರಿಶೀಲನೆ ಮಾಡಬೇಕು. ಸತ್ಯವೇದದ ಇತರೆ ಪ್ರವಾದನೆಗಳ ಹಾಗೆಯೇ, ಈ ವಾಕ್ಯಭಾಗವು ಎರಡು ವಿಧವಾಗಿ ನೆರವೇರಲ್ಪಟ್ಟಿದೆ, ಒಂದು ಅದು ಹೇಳಲ್ಪಟ್ಟ ಸಮಯದಲ್ಲಿ ಇನ್ನೊಂದು ಮುಂದೆ ನೆರವೇರಿ ರುತ್ತದೆ. ಹೇಳಿಕೆಯ ಸಮಯದಲ್ಲಿ ಅದು ದಾವೀದನ ಮಗನಾದ ಸೊಲೋಮೋನನು ದೇವಾಲಯವನ್ನು ಕಟ್ಟುವದರಲ್ಲಿ ನೆರವೇರಿತು (1 ಅರಸು 5-8). ದೇವರು ಸೊಲೋಮೋ ನನ ಮಹತ್ವವನ್ನು ಪ್ರಚುರಪಡಿಸಿದನು. ಅದೇ ರೀತಿಯಲ್ಲಿ, ವಚನ 14ರ ಹೇಳಿಕೆಯಂತೆ, ಸೊಲೋಮೋನನು ತನ್ನ ಪರಕೀಯ ಹೆಂಡತಿಯರ ನಿಮಿತ್ತವಾಗಿ, ವಿಗ್ರಹಾರಧನೆಗೆ ಒಳಗಾದನು, ಆಗ ದೇವರು ತನ್ನ ವಾಗ್ದಾನಕ್ಕನುಗುಣವಾಗಿ ಅವನನ್ನು ಶಿಕ್ಷಿಸಿದನು (1 ಅರಸು 11). ದೇವರ ವಾಗ್ದಾನಗಳು ಸೊಲೋಮೋನನ ಆಡಳಿತ ಸಮಯದಲ್ಲಿ ಹೇಗೆ ನೆರವೇರಿದವು ಎಂಬುದನ್ನು ಅರಿಯುವದು ಕಷ್ಟಕರವಲ್ಲ.

ಆದರೆ ಸೊಲೋಮೋನನ ಆಡಳಿತಾವಧಿಯಲ್ಲಿ ದೇವರು ವಾಗ್ಧಾನ ಮಾಡಿದ ನಿಂರಂತರವಾದ ರಾಜ್ಯದ ಸ್ಥಾಪನೆಯ ನೆರವೇರಿತು ಎಂದು ಅರಿಯುವದು ಕಷ್ಟಕರವೇ. ಅದು ನೆರವೇರಲಿಲ್ಲವೆಂದು ಹಳೇ ಒಡಂಬಡಿಕೆಯು ಸ್ಪಷ್ಟಪಡಿಸುತ್ತದೆ. ಸೊಲೋಮೋನನ ನಂತರದಲ್ಲಿ ರಾಜ್ಯವು ಇಬ್ಭಾಗವಾಯಿತು. ದಕ್ಷಿಣ ಭಾಗದಲ್ಲಿದ್ದ ರಾಜ್ಯ (ಯೂದ) ಕುಲವು ಮಾತ್ರ ದಾವೀದನ ವಂಶಸ್ಥರಾಗಿದ್ದರು. ಈ ರಾಜ್ಯವು ಸಹ ನಿಧಾನವಾಗಿ ನಾಶವಾಯಿತು, ಏಕೆಂದರೆ ಅವರಲ್ಲಿ ವಿಭಜನೆ ಉಂಟಾಯಿತು ಮತ್ತು ಬಾಬಿಲೋನಿನವರು ಅವರನ್ನು ವಶಪಡಿಸಿಕೊಂಡರು. ದಾವೀದನ ವಂಶದಿಂದ ಮುಂದುವರೆದಿದ್ದ ರಾಜ್ಯವು ತಾತ್ಕಾಲಿಕವಾಗಿ ಅಂತ್ಯಗೊಂಡಿತು. ಆದ್ದರಿಂದ "ನಿರಂತರ" ಎಂಬ 2 ಸಮುವೇಲ 7:13, 16 ರ ಪದಗಳನ್ನು ಸೊಲೊಮೋನನಿಂದ ತೆಗೆದು, ಮತ್ತೊಬ್ಬನಲ್ಲಿ ನೋಡಬೇಕಾಯಿತು.

# ವಾಗ್ದಾನದಲ್ಲಿದ್ದ ಮೆಸ್ಸೀಯನ ನಿರೀಕ್ಷೆ

## ಮೆಸ್ಸೀಯನ ನಿರೀಕ್ಷೆ

2 ಸಮುವೇಲ 17 ರಲ್ಲಿ ದಾವೀದನಿಗೆ ದೇವರು ಮಾಡಿದ ವಾಗ್ದಾನದಂತೆ, ಇಸ್ರಾಯೇಲ್ಯರು ಒಬ್ಬ ಮೆಸ್ಸೀಯನಿಗಾಗಿ ಎದುರುನೋಡುತ್ತಿದ್ದರು (ಅಕ್ಷರಶಃ "ಅಭಿಷೇಕ ಹೊಂದಿದವನಿಗೆ") ಆತನು ಅವರನ್ನು ಬಿಡುಗಡೆ ಮಾಡುವವದಕ್ಕಿದ್ದನು. ಅನೇಕ ವೈರಿಗಳು ಇಸ್ರಾಯೇಲ್ಯರನ್ನು ಸೋಲಿಸುವ ಸಂದರ್ಭದಲ್ಲಿ ಬಿಡುಗಡೆ ಮಾಡುವ ಈ ಮೆಸ್ಸೀಯನಿಗಾಗಿ ಅವರು ಕಾಯುತ್ತಿದ್ದರು. ಮುಖ್ಯವಾಗಿ ಬಾಬಿಲೋನಿನವರು ಅವರನ್ನು ವಶಮಾಡಿಕೊಂಡ ಸಂದರ್ಭದಲ್ಲಿ, ಇಸ್ರಾಯೇಲ್ಯರ "ಭವಿಷ್ಯವನ್ನು ರೂಪಿಸುವ" ಒಬ್ಬ ಮೆಸ್ಸೀಯನಿಗಾಗಿ ಹಾತೊರೆದರು (ಯೆರೆಮೀಯ 33:7) ಇದು ಯೆಹೂದ್ಯರ ಧಾರ್ಮಿಕ ಹಾಗೂ ರಾಜಕೀಯದ ಒಂದು ಭಾಗವಾಯಿತು.

ಈ ವಾಗ್ದಾನದ ನಿಮಿತ್ತ, "ಒಬ್ಬ ಹೊಸ ದಾವೀದನು ಯುದ್ಧ ವೀರನು/ಅರಸನು ಬರುವನು ಅವನು ವೈರಿಗಳನ್ನು ನಾಶಮಾಡುವನು ಎಂದು ನಿರೀಕ್ಷಿಸಿದ್ದರು." ಆ ಮೆಸ್ಸೀಯನು "ದಾವೀದ ವಂಶದವನಾಗಿದ್ದು" ಆತನ ರಾಜ್ಯವು ಸ್ಥಿರವಾಗಿರುವದು ಎಂದು ನಿರೀಕ್ಷೆಯನ್ನು ಸ್ಪಷ್ಟಪಡಿಸಲಾಗಿದೆ:

> ಯೆಹೋವನು ಹೀಗನ್ನುತ್ತಾನೆ - ಇಗೋ, ನಾನು ಮುಂದಿನ ಕಾಲದಲ್ಲಿ ದಾವೀದನೆಂಬ ಮೂಲದಿಂದ ಸದ್ಧರ್ಮಿಯಾದ ಮೊಳಕೆಯನ್ನು ಚಿಗುರಿಸುವೆನು; ಅವನು ರಾಜನಾಗಿ ಆಳುತ್ತಾ ವಿವೇಕದಿಂದ ಕಾರ್ಯವನ್ನು ಸಾಧಿಸುತ್ತಾ ದೇಶದಲ್ಲಿ ನೀತಿನ್ಯಾಯಗಳನ್ನು ನಿರ್ವಹಿಸುವನು. ಅವನ ಕಾಲದಲ್ಲಿ ಯೆಹೂದ್ಯರು ಸುರಕ್ಷಿತರಾಗಿರುವರು, ಇಸ್ರಾಯೇಲ್ಯರು ನೆಮ್ಮದಿಯಾಗಿ ವಾಸಿಸುವರು; ಯೆಹೋವ ಚಿದ್ಕೇನು (ಅಂದರೆ ಯೆಹೋವನೇ ನಮ್ಮ ಸದ್ಧರ್ಮ) ಎಂಬ ಹೆಸರು ಅವನಿಗಾಗುವದು (ಯೆರೆಮೀಯ 23:5, 6).

> ಸೇನಾಧೀಶ್ವರನಾದ ಯೆಹೋವನು ಇಂತೆನ್ನುತ್ತಾನೆ - ನಾನು ಆ ದಿನದಲ್ಲಿ ಅವನು ಹೇರಿದ ನೊಗವನ್ನು ಅವರ ಹೆಗಲಿನಿಂದ ಮುರಿದುಬಿಟ್ಟು ಕಣ್ಣಿಗಳನ್ನು ಕಿತ್ತುಹಾಕುವೆನು; ಇನ್ನು ಅನ್ಯರು ಅವರನ್ನು ಅಡಿಯಾಳಾಗಿ ಮಾಡಿಕೊಳ್ಳರು; ಅವರು ತಮ್ಮ ದೇವರಾದ ಯೆಹೋವನೆಂಬ ನನ್ನನ್ನೂ ನಾನು ಅವರಿಗೆ ಏರ್ಪಡಿಸುವ ರಾಜನಾದ ದಾವೀದನನ್ನೂ ಸೇವಿಸುವರು (ಯೆರೆಮೀಯ 30:8, 9).

> ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವದು; ಅದ್ಭುತ ಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ. ಸಮಾಧಾನದ ಪ್ರಭು ಎಂಬವು ಅವನ ಹೆಸರು. ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವದು, ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವದು, ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿ ನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವದು; ಸೇನಾಧೀಶ್ವರನಾದ ಯೆಹೋವನ ಅಗ್ರಹವು ಇದನ್ನು ನೆರವೇರಿಸುವದು (ಯೆಶಾಯ 9:6, 7).

> ನನ್ನ ಸೇವಕನಾದ ದಾವೀದನು ಅವರಿಗೆ ರಾಜನಾಗಿರುವನು; ಅವರೆಲ್ಲರಿಗೂ ಒಬ್ಬನೇ ಪಾಲಕನಿರುವನು; ಅವರು ನನ್ನ ನಿಯಮಗಳನ್ನು ಅನುಸರಿಸಿ ನನ್ನ ವಿಧಿಗಳನ್ನು ಕೈಕೊಂಡು ಆಚರಿಸುವರು. ನನ್ನ ಸೇವಕನಾದ ಯಾಕೋಬನಿಗೆ ನಾನು ದಯಪಾಲಿಸಿದ ದೇಶದಲ್ಲಿ ಅವರು ವಾಸಿಸುವರು; ಹೌದು, ನಿಮ್ಮ ಪಿತೃಗಳು ವಾಸಿಸಿದ ದೇಶದಲ್ಲಿ ಅವರೂ ಅವರ ಸಂತಾನದವರೂ ತಲ ತಲಾಂತರವಾಗಿ ವಾಸಿಸುವರು;

ನನ್ನ ಸೇವಕನಾದ ದಾವೀದನು ಅವರಿಗೆ ಸದಾ ಪ್ರಭುವಾಗಿರುವನು (ಯೆಹೆಜ್ಕೇಲನು 37:24, 25).

ಮೆಸ್ಸೀಯನು "ಎರಡನೆಯ ದಾವೀದನೇ" ಎಂದು ಏಕೆ ತಿಳಿಯಬೇಕು. ಏಕೆ ಎರಡನೆಯ ಮೋಶೆಯಾಗಿರಬಾರದು, ಒಬ್ಬ ಹೊಸ "ಅಬ್ರಹಾಮನಾಗಿರಬಾರದು" ಅಥವಾ ಇನ್ನೊಬ್ಬ "ನೋಹ ಆದ ದಾನಿಯೇಲನಾಗಿರಬಾರದು"? ಪ್ರಾಥಮಿಕವಾದ ಕಾರಣವೇನೆಂದರೆ, ದೇವರು ದಾವೀದನಿಗೆ ಮಾತ್ರ ಈ ವಾಗ್ದಾನವನ್ನು ಮಾಡಿರುವನು. ಯೇಸು ಅನುಭವಿಸದ ಅನೇಕ ಕಾರ್ಯಗಳು ದಾವೀದನಲ್ಲಿದ್ದಂಥವುಗಳೇ. ದಾವೀದನು ಕುರುಬನೂ ಹಾಗೂ ಅರಸನೂ ಆಗಿದ್ದನು. ಹೊಸ ಒಡಂಬಡಿಕೆಯಲ್ಲಿ ಯೇಸು ಸಹ ತನ್ನನ್ನು ಹಿಂಬಾಲಿಸುವವರಿಗೆ ತಾನು ಕುರುಬನು ಹಾಗೂ ಅರಸನು ಆಗಿರುವನು ಎಂದು ಪ್ರಕಟಮಾಡಿರುವನು (ಉದಾಹರಣೆ ಮತ್ತಾಯ 2:2; 27:37; ಯೋಹಾನ 10:11-18; 1 ಪೇತ್ರ 5:1-4; ಪ್ರಕಟನೆ 17:14; 19:16). ಇದರ ಸಂಗಡ, ಯೇಸು ಅನುಭವಿಸುವದಕ್ಕಿದ್ದ ಬಾಧೆಗಳನ್ನು ದಾವೀದನು ಈಗಾಗಲೇ ಅನುಭವಿಸಿದ್ದನು. ದಾವೀದನು ಅರಸನಾಗುವ ಮೊದಲು ಸೌಲನು ಅವನನ್ನು ಬಾಧಿಸಿದ್ದನು, ಅವನು ದಾವೀದನ ಯಶಸ್ಸಿನ ಬಗ್ಗೆ ಅಸೂಯೆ ಉಳ್ಳವನಾಗಿದ್ದನು (1 ಸಮುವೇಲ 18:28, 29). ಒಂದು ವರ್ಷದ ನಂತರ, ಅವನ ಸ್ವಂತ ಮಗನಾದ ಅಬ್ಷಾಲೋಮನೇ, ಅವನನ್ನು ಹಿಂಸಿಸಿದನು, ಅವನು ಜನರ ಮೆಚ್ಚುಗೆಯನ್ನು ಪಡೆದವನಾಗಿ, ತನ್ನ ತಂದೆಗೆ ತಿರುಗಿಬಿದ್ದನು (2 ಸಮುವೇಲ 15:10-12). ಇವರಿಬ್ಬರ ನಿಮಿತ್ತ ದಾವೀದನು ಓಡಿ ಹೋಗಿ, ಒಂಟಿಯಾಗಿ ಜೀವಿಸಬೇಕಾಯಿತು, ಅವನು ಯಾವಾಗಲೂ ಅಪಾಯದಲ್ಲಿದ್ದನು (1 ಸಮುವೇಲ 19:10-12; 2 ಸಮುವೇಲ 15:14; ಕೀರ್ತನೆ 54). ಕೀರ್ತನೆ 22ರಲ್ಲಿ ದಾವೀದನ ಹಾಗೂ ಯೇಸುವಿನ ಬಾಧೆಗಳನ್ನು ಸಮಾನವಾಗಿ ಗ್ರಹಿಸಲಾಗಿದೆ, ಯೇಸು ಶಿಲುಬೆಯಲ್ಲಿ ನೇತಾಡುವಾಗ, ಮೊದಲ ವಚನವನ್ನು ಪ್ರಾಯೋಗಿಸಲಾಗಿದೆ. ಯೇಸುವಿನ ಹಾಗೂ ಕೀರ್ತನೆಗಳ ನಡುವೆ ಯೇಸುವಿನ ಬಾಧೆಗಳ ಹೊಂದಾಣಿಕೆಯನ್ನು ನೋಡಬಹುದು: ದೇವರಿಂದ ತಿರಸ್ಕರಿಸಲ್ಪಟ್ಟು, ಹತ್ತಿರವಿದ್ದವರು ನಿಂದಿಸಿದರು, ಪೂರ್ಣವಾದ ಬಲಹೀನತೆ ಹಾಗೂ ಆಯಾಸ, ಆತನ ಬಟ್ಟೆಗಳಿಗಾಗಿ ಕೆಲವರು ಜೂಜಾಡಿದರು.

**ಮೆಸ್ಸೀಯನ ನಿರೀಕ್ಷೆ ನೆರವೇರಿತು**

ಹೊಸ ಒಡಂಬಡಿಕೆಯ ಬರಹಗಾರರು ಯೇಸು "ದಾವೀದನ ಮಗನೆಂದು" ಗ್ರಹಿಸಿಕೊಂಡಿದ್ದರು. ಆದ್ದರಿಂದ ಬಾರ್ತಿಮಾಯನು ಹೇಳಿದ್ದು ಸತ್ಯವಾಗಿ ಯೇಸುವನ್ನು "ಕ್ರಿಸ್ತನು" ಎಂದು ಅನೇಕ ಬಾರಿ ಕರೆಯಲಾಗಿದೆ (ಕ್ರಿಸ್ತನು ಅಂದರೆ ಮೆಸ್ಸೀಯನಿಗೆ ಸಮ) ಅಂದರೆ ಅಭಿಷೇಕ ಹೊಂದಿದವನು.

ಯೇಸುವೇ ಮೆಸ್ಸೀಯನು/ಅರಸನು ಎಂಬ ನಾಮಾಂಕಿತವನ್ನು ಅನೇಕ ವಿಧದಲ್ಲಿ ವಿಶ್ಲೇಷಿಸಲಾಗಿದೆ. ಉದಾಹರಣೆಗೆ: ಇಸ್ರಾಯೇಲ್ಯರು ಯೇಸುವೆಂಬ ಮೆಸ್ಸೀಯನಿಗಾಗಿ ಕಾದುಕೊಂಡಿದ್ದರು ಎಂದು ಮತ್ತಾಯನು ಬರೆದಿರುವನು. ಆದ್ದರಿಂದ ಅವನು, ಯೇಸುವೆಂಬ ಮೆಸ್ಸೀಯನ ವಂಶಾವಳಿಯನ್ನು ದಾಖಲು ಮಾಡಿ, ಯೇಸು ದಾವೀದನ ಮಗನು, ಈತನು ಅಬ್ರಾಹಾಮನ ಮಗನು ಎಂದು ಬರೆದಿರುವನು (ಆ ಅಂಶವನ್ನು ಯೆಹೂದ್ಯರು ಎಂದಿಗೂ ಮರೆಯರು, 2 ಸಮುವೇಲ 7ರ ವಾಗ್ದಾನ). ನಂತರದಲ್ಲಿ ಆತನು ದಾವೀದನ ವಂಶದವನು ಎಂಬುದನ್ನು ರುಜುವಾತು ಪಡಿಸಲಾಗಿದೆ. ಮೊದಲನೆಯದಾಗಿ ಲೂಕ 2:4, 5 ಯೇಸು ನಜರೇತಿನಲ್ಲಿ ಹುಟ್ಟದೆ, ಬೆತ್ಲೇಹೇಮಿನಲ್ಲಿ ಜನಿಸಿದನು ಕಾರಣವೇನೆಂದರೆ, ಯೋಸೇಫನು "ದಾವೀದನ ಕುಲಕ್ಕೆ ಸೇರಿದ ವನಾಗಿದ್ದನು" ಮತ್ತು ಅವನು ತನ್ನ ಸಂಸ್ಥಾನಕ್ಕೆ ತೆರಿಗೆಯನ್ನು ನೀಡಬೇಕಾದ್ದರಿಂದ ತನ್ನ ಪೂರ್ವಜರ ವರದಿಯನ್ನು ನೀಡಬೇಕಿತ್ತು. ಇದು ಇತಿಹಾಸದಲ್ಲಿ

ಆಕಸ್ಮಿಕವಾಗಿದೆ; ದಾವೀದನ ಊರಿನಲ್ಲಿಯೇ, ಅಂದರೆ ಬೆತ್ಲೆಹೇಮಿನಲ್ಲಿ ಯೇಸು ಜನಿಸಿದನು.

ಈ ವಿಚಾರವು ಯೋಹಾನನ ಸುವಾರ್ತೆಯ ಉದ್ದೇಶವಾಗಿತ್ತು. "ನೀನು ಆ ಯೇಸುವನ್ನು ಕ್ರಿಸ್ತನೆಂದು ನಂಬಿ, ಆತನೆ ದೇವರ ಕುಮಾರನು; ಆತನನ್ನು ನಂಬುವ ಮೂಲಕ ನೀನು ನಿತ್ಯಜೀವವನ್ನು ಪಡೆಯಬಹುದು" (ಯೋಹಾನ 20:30, 31). "ನನ್ನನ್ನು ಏನ್ನನ್ನುತ್ತಾರೆ?" ಎಂಬ ಪ್ರಶ್ನೆಯನ್ನು ಯೇಸು ತನ್ನ ಶಿಷ್ಯರಿಗೆ ಕೇಳುವಾಗ, ಪೇತ್ರನು, "ನೀನು ಕ್ರಿಸ್ತನು, ಜೀವಸ್ವರೂಪನಾದ ದೇವರ ಮಗನು" ಎಂದು ಉತ್ತರಿಸಿದನು. ಅದಕ್ಕೆ ಯೇಸು ಪೇತ್ರನಿಗೆ ದೇವರೇ ಅದನ್ನು ನಿನಗೆ ತಿಳಿಸಿರುವನು ಎಂದು ಪ್ರಶಂಸಿಸಿದನು (ಮತ್ತಾಯ 16:15-17). ಹೊಸ ಒಡಂಬಡಿಕೆಯ ಅಂತ್ಯದ ಪ್ರಕಟನೆ 19:16ರಲ್ಲಿ ಆತನು "ರಾಜಧಿ ರಾಜನು" "ಕರ್ತಾಧಿ ಕರ್ತನು" ಎಂದು ಬರೆಯಲಾಗಿದೆ - ಆತನೇ ನಿರಂತರದ ರಾಜನು - ಇಸ್ರಾಯೇಲ್ಯರಿಗೆ ಮಾತ್ರವಲ್ಲದೆ, ಸಕಲ ಮಾನವರಿಗೂ ಅರಸನಾಗಿದ್ದಾನೆ.

## ವಾಗ್ದಾನವನ್ನು ತಿರಸ್ಕರಿಸಲಾಯಿತು

ಯೇಸುವಿನ ದಿವಸಗಳಲ್ಲಿದ್ದ ಅನೇಕ ಯೆಹೂದ್ಯರು ಆತನನ್ನು ಮೆಸ್ಸೀಯನೆಂದು ಸ್ವೀಕರಿಸದೆ, ಏಕೆ ತಿರಸ್ಕರಿಸಿದರು? ಒಂದು ವೇಳೆ ಪ್ರವಾದನೆಗಳು ಸ್ಪಷ್ಟವಾಗಿದ್ದು, ಅದನ್ನು ಯೇಸು ನೆರವೇರಿಸಿದ್ದರೆ, ಈ ಅಂಶವನ್ನು ಅವರು ಏಕೆ ಗಮನಿಸಲಾಗಲಿಲ್ಲ?

ಅದಕ್ಕೆ ಉತ್ತರವೇನೆಂದರೆ, *ಮೆಸ್ಸೀಯನ ಸಂಗತಿ ಬಹು ಪ್ರಮುಖವಾಗಿದ್ದು, ಪ್ರಖ್ಯಾತಿಯಲ್ಲಿದ್ದದ್ದರಿಂದ ಶತಮಾನಗಳಿಂದ ಜನರ ಪ್ರಮುಖವಾದ ಈ ಒಂದು ಅಂಶವನ್ನು ಆತನು ನೆರವೇರಿಸಲು ಅಸಾಧ್ಯವಾಯಿತು.* ಮೆಸ್ಸಿಯನ ಬಗ್ಗೆ ಜನರ ಮನಸ್ಸಿನಲ್ಲಿ ವಿಭಿನ್ನ ವಾದ ಚಿತ್ರಣವಿತ್ತು. ಮತ್ತು ಮೆಸ್ಸಿಯನು ಮಾಡಬೇಕಾದ ಕಾರ್ಯವನ್ನು ಮೆಸ್ಸೀಯನು ಎಂಬ ಒಬ್ಬನು ಮಾಡದೆ ಹೋದರೆ, ಮತ್ತೊಬ್ಬನನ್ನು ಆ ಸ್ಥಾನಕ್ಕೆ ತರಬಹುದೆಂದು ಜನರು ಬಯಸಿದ್ದರು.

ಮೊದಲನೆಯ ಶತಮಾನದಲ್ಲಿ, ಅಂದರೆ ಯೇಸುವಿನ ಕಾಲದ ಪ್ರಪಂಚದಲ್ಲಿ ಜೀವಿಸಿದ್ದವರು, ಮೆಸ್ಸೀಯನು ಅಂದರೆ "ಇಸ್ರಾಯೇಲ್ಯರ ಕೋಟೆಯನ್ನು ಕಾಯುವವನು" ಕ್ರಿ.ಪೂ. 63ರಲ್ಲಿ ಇದ್ದಂಥ ರೋಮಾಯರ ಆಡಳಿತದಿಂದ ಬಿಡುಗಡೆಯನ್ನು ತರುವವನು ಎಂದು ತಿಳಿದಿದ್ದರು. ಅವನು ಒಬ್ಬ ರಣಶೂರನು/ಅರಸ (ದಾವೀದನಂತೆ) ಅವರ ವೈರಿಗಳಿಗೆ ವಿರುದ್ಧವಾಗಿ ಹೋರಾಡಲು ಸೈನ್ಯವನ್ನು ಸಿದ್ಧಪಡಿವವನು ಎಂದು ತಿಳಿದಿದ್ದರು. ಆದರೆ ಅದರ ಬದಲಾಗಿ, ಯೇಸು ವೈರಿಯನ್ನು ಪ್ರೀತಿಸಿರಿ ಎಂಬ ಶಾಂತಿಯ ಸಂದೇಶವನ್ನು ಸಾರಿದನು. ಅದು ಇಡೀ ಪ್ರಪಂಚವನ್ನೇ ತನ್ನ ಮುಷ್ಟಿಯಲ್ಲಿಟ್ಟಿದ್ದಂಥ ಒಂದು ಸಾಮ್ರಾಜ್ಯಕ್ಕೆ ವಿರೋಧವಾದ ತರ್ಕವಾಗಿತ್ತು!

ನಂತರ ಯೇಸುವಿನ ಶಿಲುಬೆಯ ಮರಣದಲ್ಲಿಯೂ ಒಂದು ಸಮಸ್ಯೆ ಉದ್ಭವಿಸಿತ್ತು. ಇಸ್ರಾಯೇಲ್ಯರ ವೈರಿಗಳು ಮೆಸ್ಸೀಯನನ್ನು ಕೊಲ್ಲುವದು ಅಸಾಧ್ಯ ಎಂದು ಯೆಹೂದ್ಯರು ತಿಳಿದಿದ್ದರು. ಅದರಲ್ಲೂ ರೋಮಾಯರು ಆತನಿಗೆ ಅತಿ ಅವಮಾನಕರವಾದ ಶಿಲುಬೆಯ ಶಿಕ್ಷೆಯನ್ನು ನೀಡಿದರು. ಆದ್ದರಿಂದ ಯೇಸುವಿನ ಆರಂಭದ ಸೇವೆಯಲ್ಲಿ ಗಲಿಲಾಯದ ಅನೇಕರು ಯೇಸುವನ್ನು ಹಿಂಬಾಲಿಸಿದವರು, ಈ ಯೇಸು ರೋಮಾಯರ ಶಿಲುಬೆಯ ಮರಣದ ಕಡೆಗೆ ಹೋಗುತ್ತಿರುವನೆಂದು ತಿಳಿದು ಆತನನ್ನು ಬಿಟ್ಟು ಹೋದರು. ಈತನಿಂದ ರೋಮಾಯರ ಮೇಲೆ ಜಯ ಸಾಧಿಸಲು ಅಸಾಧ್ಯ ಎಂದು ತಿಳಿದರು.

ಯೇಸುವಿಗೆ ಹತ್ತಿರವಾದವರಲ್ಲಿ ಕೆಲವರು ಯೇಸುವನ್ನು ಶಂಕಿಸಿದರು. ಸ್ನಾನಿಕನಾದ ಯೋಹಾನನು ಯೇಸುವನ್ನು ಅಭಿಷೇಕ ಹೊಂದಿದ ದೇವರ ಕಡೆಯವನು ಎಂದು ನಂಬಿದ್ದನೋ (ಮತ್ತಾಯ 3:13-15; ಯೋಹಾನ 1:19-34; 3:25-30), ನಂತರದಲ್ಲಿ ಈ

ಯೇಸು ಬರಬೇಕಾದ ಕ್ರಿಸ್ತನೋ ಎಂದು ಪ್ರಶ್ನಿಸಿದನು, ಅಥವಾ ಅವನ ಅನುಯಾಯಿಗಳು ಮತ್ತೊಬ್ಬನಿಗಾಗಿ ಕಾಯಬೇಕಾಗಿದೆಯೇ ಅಂದನು (ಮತ್ತಾಯ 11:2-6). ಯೋಹಾನನು ಹೆರೋದನ ಸೆರೆಮನೆಯಲ್ಲಿದ್ದುಕೊಂಡು, ಮೆಸ್ಸೀಯನು ಎದ್ದು ಬಂದು ಇಸ್ರಾಯೇಲ್ಯರನ್ನು ಪುನಶ್ಚೇತನ ಮಾಡುವನು ಎಂದು ಕಾಯುತ್ತಿದ್ದನು - ಆದರೆ ಯಾವುದೇ ಸೈನ್ಯದ ಕಾರ್ಯವನ್ನು ಕೇಳಲ್ಪಡಲಿಲ್ಲ. ಯೋಹಾನನ ಮೂಲಕ ಪ್ರವಾದಿಸಲ್ಪಟ್ಟ ಮೆಸ್ಸೀಯನ ಘಟನೆಗಳು ಬೇಗನೆ ಈಡೇರಿಸುವ ಕಾಲವು ಸಮೀಪವಾಗಿದೆ ಎಂದು ಯೇಸು ಹೇಳಿದನು.

ಯೇಸುವಿನ ಮೆಸ್ಸೀಯತ್ವವನ್ನು ಅಳೆಯಲು ಆತನ ಸ್ವಂತ ಶಿಷ್ಯರಿಗೂ ಕಷ್ಟವಾಯಿತು ಆತನು ರಾಜವಂಶದವನಾಗಿ, ಸೈನ್ಯದ ಆಡಳಿತವನ್ನು ಮಾಡಿ ಮಹತ್ವದ ಸ್ಥಾನಕ್ಕೆ ಏರುವನೆಂದು ತಿಳಿದು, ಯಾಕೋಬ ಮತ್ತು ಯೋಹಾನರು ಆತನ ಎಡಬಲಗಳಲ್ಲಿ ಸ್ಥಾನವನ್ನು ಕೋರಿದರು (ಮಾರ್ಕ 10:35-40; ಮತ್ತಾಯ 20:20-23). ಇನ್ನೊಂದು ಅರ್ಥದಲ್ಲಿ ಆ ಹೊಸ ಆಡಳಿತದಲ್ಲಿ ಇವರಿಬ್ಬರೂ ಉನ್ನತ ಸ್ಥಾನವನ್ನು ಪಡೆಯಬೇಕೆಂದು ಭಾವಿಸಿದ್ದರು. ಅಪೊಸ್ತಲರ ಕೃತ್ಯಗಳು 1:6ರಲ್ಲಿ ಯೇಸುವಿನ ಪುನರುತ್ಥಾನದ ನಂತರವೂ ಆತನ ಶಿಷ್ಯರು ಆತನಿಗೆ, ಸ್ವಾಮೀ ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸಿಕೊಡುವಿಯೋ? ಎಂಬ ಪ್ರಶ್ನೆಯನ್ನು ಕೇಳಿದರು. ಒಂದು ಚಿಕ್ಕ ಆಶ್ಚರ್ಯವೇನೆಂದರೆ, ಯೇಸುವಿನ ಕಾಲದ ಯೆಹೂದ್ಯರು, ಮೆಸ್ಸೀಯೆಂದರೆ ಆತನ ಸ್ವಭಾವವೇನು ಎಂದು ಅರಿತುಕೊಳ್ಳುವಲ್ಲಿ ಸೋತುಹೋದರು, ಮತ್ತು ಆತನನ್ನು ದೇವರಿಂದ ಕಳುಹಿಸಲ್ಪಟ್ಟವನು ಎಂದು ನಂಬಲಿಲ್ಲ - ಅವನು ತೋರಿದ ಸೂಚಕ ಕಾರ್ಯಗಳನ್ನು ಅವರು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ, ಆತನೇ ಮೆಸ್ಸಿಯನು, ಆತನಿಗಾಗಿ ಇಲ್ಲಿಯವರೆಗೆ ಕಾಯಲಾಯಿತು. ಎಂಬುದನ್ನು ಅರಿಯದಾದರು (ಯೋಹಾನ 10:22-30).

ಅನೇಕರು ಆತನನ್ನು ಮೆಸ್ಸೀಯನೆಂದು ಒಪ್ಪದೆ ಇರುವ ಎಡನೆಯ ಕಾರಣ, ಆತನು ಮೆಸ್ಸೀಯನಾಗಿ ಕೇವಲ *"ದಾವೀದನ ಮಗನಿಗಿಂತಲೂ" ತುಸು ಹೆಚ್ಚಿನವನಾಗಿದ್ದನು* ಮತ್ತಾಯ 22:41-46 ರಲ್ಲಿ, ಯೇಸು ಈ ವಿಚಾರವನ್ನು ಫರಿಸಾಯರೊಂದಿಗೆ ನೇರವಾಗಿ ತಿಳಿಸಿದನು (ಅವನ ವಿಶೇಷ ವಿಧಿಗಳು), ಕ್ರಿಸ್ತನು ಅಂದರೆ ಯಾರು? ಆತನು ಯಾರ ಮಗನು? ಎಂಬ ಪ್ರಶ್ನೆಯನ್ನು ಕೇಳಿದನು. ಆತನು "ದಾವೀದನ ಮಗನು" ಎಂಬ ಉತ್ತರವನ್ನು ಅವರು ನೀಡುವಾಗ, ಅವರಿಗೆ ಯೇಸು, ಕೀರ್ತನೆ 110:1 ರಲ್ಲಿ ದಾವೀದನು ಮೆಸ್ಸೀಯನನ್ನು "ಒಡೆಯನೇ" ಎಂದು ಕರೆದಿರುವಾಗ, ಆತನು ಹೇಗೆ ದಾವೀದನ ಮಗನಾಗಲು ಸಾಧ್ಯ? ಅಲ್ಲಿ ಉತ್ತರವಿರಲಿಲ್ಲ, ಯೇಸು ತಾನು ದಾವೀದನ ವಂಶದವನಲ್ಲ ಎಂದು ಹೇಳುತ್ತಿರುವದಿಲ್ಲ. ಆತನು ದಾವೀದನಿಗಿಂತ ದೊಡ್ಡವನಾಗಿರುವದರಿಂದ, ಈ ಹೇಳಿಕೆಯು ಅಬದ್ಧವಾಗುತ್ತದೆ. ದಾವೀದನ ಮಗನು ಇಸ್ರಾಯೇಲ್ ಸಿಂಹಾಸನದಲ್ಲಿ ಕುಳಿತುಕೊಳ್ಳುವನು ಎಂದು ಬಹಳ ಹಿಂದೆಯೇ ತಿಳಿಸಲಾಗಿತ್ತು. ಅದು "ನನ್ನ ಮಗನೇ" ಎಂಬುದು (1 ಪೂರ್ವಕಾಲವೃತ್ತಾಂತ 17:13; 22:10). ಯೇಸು ದಾವೀದನ ಮಗನು ಮಾತ್ರವಾಗಿರದೆ; ಆತನು ದೇವರ ಮಗನೂ ಆಗಿದ್ದಾನೆ. ಆತನು ಕೇವಲ ಭೂಲೋಕದ ಆಡಳಿತವನ್ನು ಮಾತ್ರ ಮಾಡದೆ, ಅದಕ್ಕಿಂತಲೂ ಹೆಚ್ಚಿನ ಸೇವೆಯನ್ನು ಹೊಂದಿದ್ದನು - ಆದರೆ ಯೆಹೂದ್ಯರ ಬಯಕೆಗಳು ವಿಭಿನ್ನವಾಗಿದ್ದವು.

ದೇವರು ದಾವೀದನೊಂದಿಗೆ ಸಮೀಪದ ಹಾಗೂ ಬಹುದೂರವಾದ ವಾಗ್ದಾನಗಳನ್ನು ಮಾಡಿದ್ದನು: ಒಬ್ಬ ಮಗನು ಸಿಂಹಾಸನದಲ್ಲಿ ಕೂತುಕೊಳ್ಳುವನು, ಆತನು ಕೇವಲ ದಾವೀದ ವಂಶದ ಪುತ್ರನು ಮಾತ್ರವಾಗಿರದೆ, ಆತನು ದೇವರ ಮಗನೂ ಆಗಿದ್ದನು. ಸೊಲೋಮೋನನು ದಾವೀದನ ಸಿಂಹಾಸನದಲ್ಲಿ ಕುಳಿತುಕೊಂಡದ್ದರಿಂದ ಮೊದಲನೆಯ ವಾಗ್ದಾನವು ನೆರವೇರಿತು. ಯೇಸು ಎಂಬ ಮೆಸ್ಸೀಯನು ಅಂತಿಮವಾದ ವಾಗ್ದಾನವನ್ನು ನೆರವೇರಿಸಿ, ಆತನು ಇನ್ನೂ "ದಾವೀದನ ಸಿಂಹಾಸನದಲ್ಲಿ" ಕುಳಿತಿರುವನು!

## ಈ ದಿನಕ್ಕೆ ಸಂಬಂಧಪಟ್ಟ ವಾಗ್ದಾನ

2 ಸಮುವೇಲ 7:5-16ರಲ್ಲಿ, ದೇವರು ನಿರ್ಧಿಷ್ಟವಾಗಿ ದಾವೀದನೊಂದಿಗೆ ಮಾತನಾಡುತ್ತಿದ್ದರೂ ಈ ಸತ್ಯವೇದದ ಇತಿಹಾಸದಲ್ಲಿನ ಈ ಪಾಠಗಳು, ಪ್ರಚಲಿತ ದಿವಸ ಗಳಿಗೂ ಅನ್ವಹಿಸುತ್ತವೆ.

*ಮೊದಲನೆಯದಾಗಿ, ದೇವರ ವಾಗ್ದಾನದ ನೆರವೇರಿಕೆಗಳು ಮನುಷ್ಯನ ಪರಿಪೂರ್ಣತೆಯನ್ನು ಅವಲಂಭಿಸಿರುವದಿಲ್ಲ.* ದೇವರು ದಾವೀದನಿಗೆ ವಾಗ್ದಾನಗಳನ್ನು ಮಾಡಿದಾಗ ಯಾವುದೇ ವಿಧವಾದ ನಿರ್ಭಂಧಗಳನ್ನು ವಿಧಿಸಲಿಲ್ಲ. ನಂತರದಲ್ಲಿ ದಾವೀದನು ಭಯಂಕರವಾದ ಪಾಪವನ್ನು ಮಾಡಿದ್ದರೂ, ದೇವರು ಅವನ ವಿಷಯದಲ್ಲಿ ಮಾಡಿದ ವಾಗ್ದಾನ ಗಳನ್ನು ಈಡೇರಿಸಿದನು. ಅನೇಕ ಸಾರಿ ನಾವುಗಳು ನಮ್ಮ ಹಾಗೂ ನಮ್ಮ ಸಭೆಯಲ್ಲಿನ ಬಲಹೀನತೆಗಳನ್ನೇ ನೋಡುತ್ತೇವೆ, ಆದರೆ ನಾವುಗಳು ಅದನ್ನು ಗಮನಿಸಬಾರದು. ದೇವರು ತನ್ನೆಲ್ಲಾ ವಾಗ್ದಾನಗಳನ್ನು ನೆರವೇರಿಸುವನು: ಯೇಸು ಈಗಲೂ ಸಹ ಸಿಂಹಾಸನದಲ್ಲಿರುವನು, ಆತನ ಜನರ ರಕ್ಷಣೆಯು ನಿಶ್ಚಿಯವಾದದ್ದೆ.

*ಎರಡನೆಯದಾಗಿ, ಹೆಚ್ಚು ಕಾಲಾವಕಾಶವನ್ನು ತೆಗೆದುಕೊಂಡರು ದೇವರು ತನ್ನ ವಾಗ್ದಾನ ಗಳನ್ನು ನೆರವೇರಿಸುವನು.* ದಾವೀದನಿಂದ ಯೇಸುವಿನವರೆಗೆ ಒಂದು ಸಾವಿರ ವರ್ಷಗಳ ಅಂತರ ಉಂಟಾಗಿತ್ತು - ಆದರೆ ಮೆಸ್ಸೀಯನು ಬಂದನು. ಅದೇ ರೀತಿಯಲ್ಲಿ ಯೇಸು ಈ ಲೋಕಕ್ಕೆ ಒಂದು ಎರಡು ಸಾವಿರ ವರ್ಷಗಳು ಗತಿಸಿ ಹೋಗಿವೆ. ಆತನು ಪುನಃ ಬರತ್ತಾನೆ ಎಂದು ವಾಕ್ಯವು ತಿಳಿಸುತ್ತದೆ ನಮ್ಮ ಸಮಯಕ್ಕನುಗುಣವಾಗಿ ದೇವರು ಕಾರ್ಯನಿರ್ವಹಿಸದೇ ಇರುವದರಿಂದ ಬೇಸರಪಟ್ಟುಕೊಳ್ಳಬಾರದು. ಅದರ ಬದಲಾಗಿ ಆತನ ಉದ್ದೇಶಗಳು ನಮ್ಮಲ್ಲಿ ನೆರವೇರಬೇಕೆಂದು ನಂಬಿಕೆಯಿಂದ ಕಾದುಕೊಂಡಿರಬೇಕು.

*ಮೂರನೆಯದಾಗಿ, ಯೇಸುವಿನ ಕುರಿತಾದ ಅರ್ಧ ಸತ್ಯವನ್ನು ಕೇಳದಂತೆ ಎಚ್ಚರ ವಾಗಿರಬೇಕು.* "ಬಾರ್ತಿಮಾಯನು ದಾವೀದ ಕುಮಾರನೇ" ಎಂದು ಸರಿಯಾಗಿಯೇ ಕರೆದಿದ್ದನು, ಆದಾಗ್ಯೂ ಅವನು ಅರ್ಧ ಸತ್ಯವನ್ನು ಮಾತ್ರ ಹೇಳಿದ್ದನು. ಈ ದಿನಗಳಲ್ಲಿ ಯೇಸುವನ್ನು ಮಹತ್ವದ ವ್ಯಕ್ತಿ, ಒಬ್ಬ ಪ್ರವಾದಿ, ಅದರ ರಕ್ಷಕನಾಗಿದ್ದರೂ, ರಕ್ಷಕನಲ್ಲ ಎಂದು ಜನರು ಒಪ್ಪಿಕೊಳ್ಳುತ್ತಾರೆ ಇದರಲ್ಲಿ ಸಂದೇಹವಿಲ್ಲ. ಯೇಸುವು ಕ್ರಿಸ್ತನು/ಮೆಸ್ಸೀಯನು ಹಾಗೂ ದೇವರ ಮಗನು ಎನ್ನುವದೇ ಉತ್ತಮವಾದ್ದು.

*ನಾಲ್ಕನೆಯದಾಗಿ ನಾವು ಸಾಧಿಸಿರುವಂಥ ಯಾವ ಕ್ರಿಯೆಗಳು, ದೇವರ ಕ್ರಿಯೆಗೆ ಸಮಾನವಾಗಲಾರದು.* ದಾವೀದನು ದೇವರಿಗಾಗಿ ಆಲಯವನ್ನು ಕಟ್ಟಲು ಮುಂದಾಗಿದ್ದನು. ಆದರೆ ದೇವರು ತಾನೇ ನೀಡುವವನು, ಮನುಷ್ಯರಿಂದ ಏನನ್ನು ಬೆಂಬಲಿಸುವವನಲ್ಲ ಎಂದು ತಿಳಿಸಿದನು. ದಾವೀದನು ಬೆಂಬಲಿಸುವದಕ್ಕಿಂತಲೂ ಆಶೀಸುವದಕ್ಕಿಂತಲೂ ಹೆಚ್ಚಾಗಿ ದೇವರು ಅವನನ್ನು ಆಶೀರ್ವದಿಸಿದನು. ನಮ್ಮ ಒಳ್ಳೇಯ ಆತ್ಮೀಕ ಕ್ರಿಯೆಗಳ ಮೂಲಕ ದೇವರನ್ನು ಒಲಿಸಿಕೊಳ್ಳಬಹುದು ಎಂದು ತಿಳಿದಿದ್ದರೆ, ನಮ್ಮನ್ನು ನಾವೇ ಮೋಸ ಪಡಿಸಿಕೊಳ್ಳುತ್ತೇವೆ. ನಮ್ಮಿಂದ ಮಾಡಲಾಗದ ಕಾರ್ಯವನ್ನು ದೇವರು ಯೇಸು ಕ್ರಿಸ್ತನ ಮೂಲಕ ಸಾಧಿಸಿರುವನೆಂದು ಮುಂದೆ ನೋಡುತ್ತೇವೆ. ವಿಧೇಯತೆಗೆ ಕರೆಯಲ್ಪಟ್ಟಿದ್ದೇವೆ, ಆ ಸಮಯದಲ್ಲಿ ನಾವುಗಳು "ನಮ್ಮ ಸಕಲ ಸತ್ಕ್ರಿಯೆಗಳು ಹರಕು ಬಟ್ಟೆ" ಎಂಬುದಾಗಿ ತಿಳಿಯಬೇಕು (ಯೆಶಾಯ 64:6). ನಂತರ ನಾವು ದೇವರು ಶಿಲುಬೆಯ ಮೇಲೆ ಮಾಡಿರುವ ಕಾರ್ಯವನ್ನು ವೀಕ್ಷಿಸಬೇಕು. ಕರ್ತನೇ ನನ್ನನ್ನು ಕರುಣಿಸು ಎಂಬ ಬಾರ್ತಿಮಾಯನ ಪ್ರಾರ್ಥನೆಯನ್ನೇ ನಾವುಗಳು ಮಾಡಬಹುದು. ಯೇಸುವಿನ ಮೂಲಕ ಆತನು ತನ್ನ ವಾಗ್ದಾನವನ್ನು ಈಡೆರಿಸುವನು.

## ದೇವರ ಆಲಯವನ್ನು ಕಟ್ಟಲು ದಾವೀದನು ಏಕೆ ಯೋಗ್ಯನಾಗಿರಲಿಲ್ಲ?

ದೇವರು ಈ ಕಾರ್ಯವನ್ನು ತಿರಸ್ಕರಿಸಿದ ವಿಚಾರವನ್ನು 2 ಸಮುವೇಲ 7ರಲ್ಲಿ ಅಥವಾ 1 ಪೂರ್ವಕಾಲವೃತ್ತಾಂತ 17ರಲ್ಲಿ ತಿಳಿಸಿರುವದಿಲ್ಲ, ದಾವೀದನು ಅದನ್ನು ಮಾಡುವದಕ್ಕೆ ಇಚ್ಛಿಸಿದನು ಎಂಬ ಸೂಚನೆಯನ್ನು ಮಾತ್ರ ಕಾಣುತ್ತೇವೆ. ಹಾಗೂ 1 ಅರಸು 5:3 ಮತ್ತು 1 ಪೂರ್ವಕಾಲವೃತ್ತಾಂತ 22:8; 28:3ರಲ್ಲಿ ಕಾರಣವನ್ನು ನೀಡಲಾಗಿದೆ: ದಾವೀದನು ಯಾವಾಗಲೂ ಯುದ್ಧ ಮಾಡುವವನಾಗಿ ರಕ್ತ ಸುರಿಸುತ್ತಿದ್ದನು.

ಆಲಯ ನಿರ್ಮಾಣ ಮಾಡಲು ಏಕೆ ಈ ಕಾರಣವು ಅಡ್ಡಿಯಾಯಿತು? ಎರಡು ಉತ್ತರಗಳ ಸಾಧ್ಯತೆಗಳಿವೆ. ಮೊದಲನೆಯದು 1 ಅರಸು 5:3ರಲ್ಲಿದೆ, ಯುದ್ಧದ ನಿಮಿತ್ತ ದಾವೀದನು ಬಹು ಕಾರ್ಯನಿರತನಾಗಿದ್ದನು ಎಂದು ಸೊಲೋಮೋನನು ತಿಳಿಸುತ್ತಾನೆ. 2 ಸಮುವೇಲ 7:1ರಲ್ಲಿ ದೇವರು ಅವನಿಗೆ ಸಮಾಧಾನವನ್ನು ನೀಡಿದ ಸಮಯದಲ್ಲಿ ಈ ಆಶೆಯು ಅವನಲ್ಲಿ ಬಂದ ಕಾರಣ, ಮೇಲಿನ ಕಾರಣವು ಪ್ರಾಥಮಿಕವಾಗಿರುತ್ತದೆ. ಒಂದು ವೇಳೆ ನಿರ್ಧಿಷ್ಟವಾದ ಕಾರಣವನ್ನು 1 ಪೂರ್ವಕಾಲ ವೃತ್ತಾಂತ 22:8ರಲ್ಲಿ ಕಾಣಬಹುದು. "ಆದರೆ ಯೆಹೋವನು ನನಗೆ ನೀನು ಬಹಳ ರಕ್ತವನ್ನು ಸುರಿಸಿದ್ದರಿಂದ ನನ್ನ ಹೆಸರಿಗಾಗಿ ಆಲಯವನ್ನು ಕಟ್ಟಬಾರದು" (1 ಪೂರ್ವಕಾಲ ವೃತ್ತಾಂತ 28:3 ನೋಡಿರಿ) ದಾವೀದನು ಬಹಳ ರಕ್ತವನ್ನು ಸುರಿಸಿದ್ದರಿಂದ, ಅವನು ಅಪವಿತ್ರನಾಗಿರಬಹುದು. ಆದ್ದರಿಂದ ಆಲಯ ಕಟ್ಟಲು ಯೋಗ್ಯನಾಗಿರಲಿಲ್ಲ (ಯಾಜಕಕಾಂಡ 17 ಮೋಶೆಯ ಕಟ್ಟಳೆಗಳಲ್ಲಿರುವ ರಕ್ತದ ಮತ್ತು ಯಥಾರ್ಥವಾದ ಪವಿತ್ರತೆಯು ಬಗ್ಗೆ ನೋಡಿರಿ). ಆತನ ಮಗನಾದ ಸೊಲೋಮೋನನು ಈ ಸಮಸ್ಯೆಯನ್ನು ಹೊಂದಿರಲಿಲ್ಲ, ಯಾಕೆಂದರೆ ಅವನ ಪ್ರಾರಂಭವು ಸಮಾಧಾನ ಹಾಗೂ ಸಮೃದ್ಧಿಯಲ್ಲಿ ಆರಂಭವಾಯಿತು (1 ಅರಸು 5:4). ಆದ್ದರಿಂದ ಸೊಲೋಮೋನನು ಹೇಳಿದ್ದೇನೆಂದರೆ,

> ಯೆಹೋವನು ನನ್ನ ತಂದೆಯಾದ ದಾವೀದನಿಗೆ - ನಾನು ನಿನಗೆ ಬದಲಾಗಿ ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವ ನಿನ್ನ ಮಗನು ನನ್ನ ಹೆಸರಿಗೆ ಒಂದು ಆಲಯವನ್ನು ಕಟ್ಟಲಿ ಎಂದು ಹೇಳಿದ್ದರಿಂದ ನಾನು ನನ್ನ ದೇವರಾದ ಯೆಹೋವನ ಹೆಸರಿಗೆ ಒಂದು ಆಲಯವನ್ನು ಕಟ್ಟಬೇಕೆಂದಿರುತ್ತೇನೆ (1 ಅರಸು 5:5).